(ಸದನವು ರಾತ್ರಿ 7 02 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 5ನೇ ಆಗಸ್ಟ್ 2004ರಂದು ಬೆಳಿಗ್ಗೆ 9 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಅನುಬಂಧ–I

ದಿನಾಂಕ 28–7–2004ರ ಚುಕ್ಕೆಗುರುತಿಲ್ಲದ ಪ್ರಶ್ನೋತ್ತರಗಳು

451(615) ಶ್ರೀ ಅಂಗಾರ ಎಸ್. (ಸುಳ್ಯ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಕ್ಯೂಲ ಕೆ.ಸಿ ಫಾರ್ಮನ್ನು ಕೃಷಿ ವಿಶ್ವವಿದ್ಯಾಲಯವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

452(616) ಶ್ರೀ ಅಂಗಾರ ಎಸ್ (ಸುಳ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಡಾ॥ ಶಿವರಾಮ ಕಾರಂತ ಪ್ರಥಮದರ್ಜೆ ಕಾಲೇಜು, ಬೆಳ್ಳಾರೆ ಸುಳ್ಯ ಇಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಕೊರಡಿಗಳು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಹಾಗೂ ಕೊರಡಿಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) 2004–05ನೇ ಸಾಲಿನಲ್ಲಿ ಒದಗಿಸಲಾಗಿರುವ ಮೊತ್ತದಲ್ಲಿ ಈ ಕಾಲೇಜಿಗೆ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತಿದೆ

454(621) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪಶುಪಾಲನೆ, ಮೀನುಗಾರಿಕೆ ವಿಶ್ವವಿದ್ಯಾನಿಲಯ ಸ್ಥಾಪನೆಯ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ, ಯಾವಾಗ ಮತ್ತು ವಿಶ್ವವಿದ್ಯಾನಿಲಯಗಳು ಎಲ್ಲಿ ಆರಂಭಿಸಲಾಗುವುದು ಹಾಗೂ ವಿಳಂಬವಾಗಲು ಕಾರಣವೇನು?

ಇ) ಇದಕ್ಕೆ ಬೇಕಾದ ಸ್ಥಳಕ್ಕಾಗಿ ಎಷ್ಟು ಎಕರೆ ಜಾಗ ಗುರುತಿಸಲಾಗಿದೆ?

ಈ) ಸಂಪನ್ಮೂಲ ಕ್ರೋಢೀಕರಣ ಹಾಗೂ ನಿಗದಿಪಡಿಸಿರುವ ಮೊತ್ತವೆಷ್ಟು?

ಉ) ಇದನ್ನು ಖರ್ಚು ಮಾಡಲಾಗಿದೆಯೇ ಅಥವಾ ಇಲ್ಲವೆ

ಊ) ಇಲ್ಲಿದಿದ್ದಲ್ಲಿ, ಹಿಂತಿರುಗಿ ಪಡೆಯಲಾಗಿದೆಯೇ (ವಿವರ ನೀಡುವುದು)

ಋ) ಕುಲಪತಿಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆಯು ವಿಳಂಬವಾಗಲು ಕಾರಣಗಳೇನು?

ೠ) ಇದರಡಿಯಲ್ಲಿ ಸಂಶೋಧನಾ ಕೇಂದ್ರ ಹಾಗೂ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಈ ವಿಶ್ವವಿದ್ಯಾನಿಲಯಗಳಿಗೆ ಯಾವ ಹೆಸರನ್ನಿಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಸರ್ಕಾರದ ಆದೇಶ ಸಂಖ್ಯೆ ಪಸಂಮೀ 150 ವಆಸೇ 2004 ದಿನಾಂಕ 28–02–2004ರ ಅನ್ವಯ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮ 2004ನ್ನು ದಿನಾಂಕ 28–02–2004ರಂದು ಹೊರಡಿಸುವ ಮೂಲಕ ಪಶುವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಿದೆ

ಆ) ಬೀದರ್‌ನಲ್ಲಿ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗುವುದು, ಕುಲಪತಿಗಳ ನೇಮಕಾತಿ ಪ್ರಕ್ರಿಯೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಕುಲಪತಿಗಳ ನೇಮಕಾತಿ ನಂತರ ಈ ವಿಶ್ವವಿದ್ಯಾನಿಲಯವು ಕಾರ್ಯಾರಂಭ ಮಾಡುವುದು, ಚುನಾವಣೆ ನೀತಿ ಸಂಹಿತೆ ಜಾರಿ ಇದ್ದ ಕಾರಣ ಕುಲಪತಿಗಳ ನೇಮಕಾತಿಗೆ ತಡವಾಗಿದೆ

ಇ) 157 27 ಎಕರೆ ಜಮೀನನ್ನು ನಿಗಧಿಪಡಿಸಿದೆ

ಈ) ರೂ 2 00 ಕೋಟಿ ಯೋಜನೆಯಡಿಯಲ್ಲಿ ನಿಗದಿಪಡಿಸಿದೆ

ಉ) ಇನ್ನೂ ಖರ್ಚು ಮಾಡಿರುವುದಿಲ್ಲ

ಊ) ವಿಶ್ವವಿದ್ಯಾನಿಲಯ ಕಾರ್ಯಾರಂಭವಾದ ನಂತರ ಹಣ ಖರ್ಚು ಮಾಡಲಾಗುವುದು

ಋ) ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ವಿಳಂಬವಾಗಿದ್ದು ಕುಲಪತಿಗಳ ನೇಮಕ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ೠ) ಕಾಲೇಜುಗಳ ಸಂಖ್ಯೆ 4

ಸಂಶೋಧನಾ ಕೇಂದ್ರಗಳ ಸಂಖ್ಯೆ–17

ಕರ್ನಾಟಕ ಪಶುವೈದ್ಯಕೀಯ ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಎಂದು ಕರೆಯಲಾಗುವುದು

455(845) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪಶುಸಂಗೋಪನಾ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು? (ಸಿಬ್ಬಂದಿವಾರು, ಜಿಲ್ಲಾವಾರು, ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಹುದ್ದೆಗಳು ಎಷ್ಟು ಸಮಯದಿಂದ ಖಾಲಿ ಇದೆ ಹಾಗೂ ಇದನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಧಮಸಿಂಗ್ (ಮುಖ್ಯಮಂತ್ರಿಗಳು)

ಅ) ಒಟ್ಟು 4618 ಹುದ್ದೆಗಳು ಖಾಲಿ ಇರುತ್ತವೆ ಸಿಬ್ಬಂದಿವಾರು, ಜಿಲ್ಲಾವಾರು ವಿವರ ಅನುಬಂಧ–1ರಲ್ಲಿ ನೀಡಿದೆ ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರ ಅನುಬಂಧ–2ರಲ್ಲಿ ನೀಡಿದೆ

ಆ) (ಅ) 'ಎ' ವೃಂದದ ಅಧಿಕಾರಿ ಹುದ್ದೆಗಳು ಸುಮಾರು ಒಂದು ವರ್ಷದಿಂದ,